
**ಶಾಕಿರಾ ಪರ್ವೀನ್**
**ಅವರ ಎರಡು ಕವಿತೆಗಳು**

# ಮಹಾ ಪ್ರಳಯ

ಕೆಲವು ವಸ್ತುಗಳು ಅಗತ್ಯ ಕಾರಣಗಳಿಲ್ಲದೆ
ಸೆರೆಯಾಗಿದ್ದವು ನನ್ನ ಕೈ ಚೀಲದೊಳಗೆ
ಒಂದು ಸೋಮವಾರದ ಸಂಜೆ
ಅವುಗಳ ಅರ್ಥಹೀನ ಇರುವಿಕೆಯ
ತೆರವುಗೊಳಿಸಿದೆ

ನಾ ಕಂಡೆ ಅಲ್ಲಿ
ಬಾಚಣಿಗೆಯ ಹಲ್ಲಿಗೆ ಸಿಲುಕಿದ
ಮಿದುಳಿನ ಸತ್ತ ಉಸಿರಿನ ಜಾಡು
ರಹಸ್ಯ ಮುತ್ತುಗಳ ಠೇವಣಿ ಇಟ್ಟ ಮೂಲೆ
ಮತ್ತಲ್ಲಿ ಪೊರೆಯಂತೆ ಬೇಷರತ್ ಬಿಡುಗಡೆಗಾಗಿ
ಕಾಯುತ್ತಾ
ಮುಖ ಕೆಳಗಾಗಿ ಬಿದ್ದುಕೊಂಡಿರುವ
ಬಳಸಿ ಬಿಟ್ಟ ಒಂದೆರಡು ಟಿಶ್ಯೂ ಪೇಪರು

ಅಲ್ಲೇ
ವ್ಯಾನಿಟಿ ಬ್ಯಾಗಿನ ಆ ಮೂಲೆಯಲ್ಲೇ
ಸಿಲುಕಿಕೊಂಡಿತ್ತು
ಸೇಫ್ಟಿ ಪಿನ್ನು
ಮತ್ತದರೊಳಗೆ ಉಸಿರು ಬಿಗಿ ಹಿಡಿದು
ಕಾಯುತ್ತಿತ್ತು
ಇನ್ನೂ ಮುಗಿಯದ ತಾಜಾ ತಾಜಾ ಪ್ರಳಯ



ಕಲೆ: ಗುರು ರಾಘವೇಂದ್ರ



# ತಾಪಮಾನ

ತಾಪಮಾನ
ಮೈನಸ್ 30 ಡಿಗ್ರಿ ಸೆಲ್ಸಿಯಸ್
ಕೈಗವಸು ಧರಿಸಿ ಹೊರಗೆ ಬಂದೆ

ಏನೋ ಬೀಳುವ ಶಬ್ದ ಕೇಳಿಸಿತು
ನನ್ನ ಬೆರಳ ಬಿಗಿಹಿಡಿದಿದ್ದ ನಿಶ್ಚಿತಾರ್ಥದ ಉಂಗುರ
ಇಲ್ಲ ಇಲ್ಲ!
ಚಳಿಗಾಲ ಇಷ್ಟೊಂದು ಕ್ರೂರಿಯಾಗಿರಲಾರದು

ಮನೆಗೆ ಹಿಂತಿರುಗಿ ಬಂದು ನೋಡುತ್ತೇನೆ
ನನ್ನ ಉಂಗುರ ಬೆರಳಿನ ಒಂದು ಭಾಗವೇ
ಉದುರಿಹೋಗಿದೆ

ಎಲ್ಲರೂ ಹೇಳುತ್ತಿದ್ದಾರೆ:
ಅರಿವಿಲ್ಲದೇ ಅನಾಯಾಸವಾಗಿ
ಚಳಿ ಕಟ್ಟಿ ಮಾಡಿದ ಗಾಯವಿದು
ಹೌದು
ಇದು ಹಿಮದ ಹುಣ್ಣೆಂದು